IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಗೌರಿಬಿದನೂರು ತಾಲೂಕು ಕೆರೆಗಳ ಜಲವ್ಯವಸ್ಥೆಯ ಸಾಂಸ್ಕೃತಿಕ ಇತಿಹಾಸ

**ಐಶ್ವರ್ಯ ಎಂ. ಬೆಂಗಳೂರು.**

**ಪ್ರಸ್ತಾವನೆ :**

ಹಂಪೆಯ ಲಕ್ಷ್ಮೀಧರಾಮಾತ್ಮನ ಶಾಸನದ ಪ್ರಕಾರ ಪುಣ್ಯಕಾರ್ಯಗಳಲ್ಲಿ ಕೆರೆಯ ನಿರ್ಮಾಣವೂ ಒಂದಾಗಿತ್ತು. ಜೀವರಾಶಿಗಳಿಗೆಲ್ಲಾ ಉದಕವೇ ಪ್ರಾಣವಾಗಿರುವುದರಿಂದ 'ಪೆನಗೊಂಡಿಗೆ ಹೆಂನೆಯ(ಪೆನ್ನಾರ್) ನದಿಯನ್ನು ತರಬೇಕೆಂದು ಶ್ರೀ ವೀರ ಪ್ರತಾಪ ಬುಕ್ಕರಾಯ ಚಾವಡಿ ಒಳಗೆ ದಶವಿದ್ಯಾ ಚಕ್ರವರ್ತಿ ಜಲಸೂತ್ರದ ಸಿಂಗಾಯಭಟ್ಟನಿಗೆ ನಿರೂಪವ ಕೊಟ್ಟ, ಆ ಸಿಂಗಾಯ ಭಟ್ಟನು ಆ ಕಾಲುವೆಯನ್ನು ಸಿರುವೆರೆದ ಕೆರೆಗೆ ತಂದು ಆ ಕಾಲುವೆಯ ಹೆಸರನ್ನು ಪ್ರತಾಪ ಬುಕ್ಕರಾಯ ಮಂಡಲದ ಕಾಲುವೆಯಾಗಿ ಮಾಡಿಸಿ ಶಾಸನವನ್ನು ಬರೆಸಿದನು' ಎಂದು ಅರಸನ ಹೆಸರನ್ನು ಕಾಲುವೆಗೆ ಇಟ್ಟಿರುವುದನ್ನು ಗೌರಿಬಿದನೂರು ಶಾಸನವು ದಾಖಲಿಸಿದೆ. ಅರಸರು ಕೇವಲ ಕೆರೆ ಕಟ್ಟಿಸುವುದಷ್ಟೇ ತಮ್ಮ ಕೆಲಸವೆಂದು ತಿಳಿಯದೆ, ಎಲ್ಲಾ ಜೀವಗಳ ಹಿತರಕ್ಷಣೆಗೆ ಕಾಳಜಿ ವಹಿಸುತ್ತಿದ್ದರು.

ಗೌರಿಬಿದನೂರಿನ ಕಲ್ಲೂಡಿಯ ಶಾಸನ ಜಿಲ್ಲೆಗೆ ನೀರು ತರಲು ಮಾಡಿದ ಕೆಲಸದ ಬಗ್ಗೆ ಮಾಹಿತಿ ನೀಡಿದರೆ ಹಲವಾರು ಶಾಸನಗಳು ಕೆರೆಗಳ ನಿರ್ಮಾಣ, ನಿರ್ವಹಣೆ, ದುರಸ್ಥಿ, ಮುಂತಾದ ವಿಷಯಗಳ ಬಗ್ಗೆ ಮಾಹಿತಿ ಒದಗಿಸುತ್ತದೆ. ಇನ್ನೂ ಕೆಲವು ಶಾಸನಗಳು ಕೆರೆಗಳು ಯಾರು ನಿರ್ಮಾಣ ಮಾಡುತ್ತಿದ್ದಾರೆ ಮತ್ತು ಯಾಕೆ ನಿರ್ಮಾಣ ಮಾಡುತ್ತಿದ್ದಾರೆ ಹಾಗು ಆ ಕೆರೆಯನ್ನು ಕೆರೆ ಹೊಂದಿರುವ ಗ್ರಾಮದ ಜನರು ಅಥವಾ ಕೆರೆ ನಿರ್ವಹಣೆಗೆಂದೇ ನೇಮಿಸಿರುವ ವ್ಯಕ್ತಿ ಯಾವ ರೀತಿ ಕೆರೆಯನ್ನು ಭದ್ರಪಡಿಸಿಕೊಂಡು ಅದು ಎಲ್ಲರಿಗೂ ಉಪಯೋಗವಾಗುವಂತೆ ನೋಡಿಕೊಳ್ಳಬೇಕು ಎಂಬ ಮಾಹಿತಿಯನ್ನು ಒದಗಿಸುತ್ತದೆ. ಇವೆಲ್ಲವೂ ಸಾಮಾನ್ಯ ವಿಷಯಗಳೇ ಆದರೂ ಮುಂದಿನ ಪೀಳಿಗೆ ನೀರಿನ ತೊಂದರೆ ಅನುಭವಿಸಬಾರದು ಎಂಬ ಕಳಕಳಿಯೂ ರಾಜರಾದಿಯಾಗಿ ನಾಗರೀಕರಲ್ಲಿ ಯಾವ ರೀತಿ ಬೇರೂರಿತ್ತು ಎಂಬ ಸಂದೇಶವನ್ನು ನೀಡುತ್ತವೆ. ಕೇವಲ ಕೆರೆಯ ನಿರ್ಮಾಣ ಕಾರ್ಯ ಅಷ್ಟೇ ಅಲ್ಲದೆ ಅದರ ನಿರ್ವಹಣೆಯ ವಿಧಾನಗಳನ್ನು ಶಾಸನಗಳು ಒಳಗೊಂಡಿರುವುದು ವಿಶೇಷವೇ ಸರಿ.

"ಗೌರೀಬಿದನೂರು ತಾಲ್ಲೂಕಿನಲ್ಲಿ 94 ಕೆರೆಗಳು ಇವೆ. ಕೆರೆಗಳಿಗೆ ಪ್ರಸಿದ್ಧವಾಗಿರುವ ಜಿಲ್ಲೆಯಲ್ಲಿ ಸು.5497 ಕೆರೆಗಳನ್ನು ಬಿ.ಎಲ್.ರೈಸ್‌ರವರು ತಮ್ಮ ಗ್ಯಾಸೆಟಿಯರ್‌ನಲ್ಲಿ ಗುರ್ತಿಸಿರುವುದನ್ನು ಗಮನಿಸಬಹುದಾಗಿದೆ. ಇದರಲ್ಲಿ ಗೌರಿಬಿದನೂರು ತಾಲೂಕಿನ ಕೆರೆಗಳ ಬಗ್ಗೆಯೂ ಬೆಳಕು ಚೆಲ್ಲಿದ್ದಾರೆ. ಗೌರೀಬಿದನೂರು ತಾಲ್ಲೂಕಿನಲ್ಲಿ ಸುಮಾರು 94 ಕೆರೆಗಳು ಇರುವುದಾಗಿ ಆ ದಿಗಳಲ್ಲಿಯೇ ದಾಖಲಿದ್ದಾರೆ. ಜಿಲ್ಲೆಯಲ್ಲಿ ಪ್ರಮುಖವಾದ ಪಾಲಾರ್, ಉತ್ತರ ಪೆನ್ನಾರ್ ಮತ್ತು ದಕ್ಷಿಣ ಪೆನ್ನಾರ್, ಇತರೆ ನದೀ ಮೂಲಗಳಿಗೆ ಒಟ್ಟು 349 ಕೆರೆಗಳನ್ನು ನಿರ್ಮಿಸಲಾಗಿದೆ. ಅವುಗಳಲ್ಲಿ ಪಾಲಾರ್ ನದಿಗೆ 141 ಕೆರೆಗಳನ್ನು, ಉತ್ತರ ಪೆನ್ನಾರ್ ನದಿಗೆ 166 ಕೆರೆಗಳನ್ನು, ದಕ್ಷಿಣ ಪೆನ್ನಾರ್ ನದಿಗೆ 35 ಕೆರೆಗಳನ್ನು ಇತರೆ ಹೊಳೆಗಳಿಗೆ 07 ಕೆರೆಗಳನ್ನು ನಿರ್ಮಿಸಲಾಗಿದೆ."[1]

**ಚಿಕ್ಕಬಳ್ಳಾಪುರದ ನಂದಿಬೆಟ್ಟದಲ್ಲಿ ಹುಟ್ಟುವ ಉತ್ತರ ಪೆನ್ನಾರ್ ಗೌರಿಬಿದನೂರು,** ಗುಡಿಬಂಡೆ, ಬಾಗೇಪಲ್ಲಿ ತಾಲ್ಲೂಕುಗಳಾದ್ಯಂತ, ದಕ್ಷಿಣ ಪೆನ್ನಾರ್ ನದಿ ಮಾಲೂರು ತಾಲ್ಲೂಕಾದ್ಯಂತ ಹರಿಯುತ್ತದೆ. ಬಂಗಾರಪೇಟೆ ತಾಲ್ಲೂಕಿನಲ್ಲಿ ದಕ್ಷಿಣ ಪೆನ್ನಾರ್ ಮತ್ತು ಪಾಲಾರ್ ನದಿ, ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಪಾಲಾರ್ ಮತ್ತು ಉತ್ತರ ಪೆನ್ನಾರ್ ನದಿ, ಶಿಡ್ಲಘಟ್ಟ ಹಾಗೂ ಚಿಕ್ಕಬಳ್ಳಾಪುರ ತಾಲ್ಲೂಕುಗಳಾದ್ಯಂತ ಹೆಚ್ಚು ದಕ್ಷಿಣ ಪೆನ್ನಾರ್ ಮತ್ತು ಉತ್ತರ ಪೆನ್ನಾರ್ ನದಿ, ಸ್ವಲ್ಪ ಭಾಗ ಪಾಲಾರ್ ನದಿಯೂ ಹರಿಯುತ್ತದೆ. 'ಇವು ಜಿಲ್ಲೆಯ ನಾಲ್ಕು ಸಾವಿರಕ್ಕೂ ಹೆಚ್ಚು ಕೆರೆಗಳಲ್ಲಿ ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಗೆ ಬರುವ ಕೆರೆಗಳ ವಿವರ'ವಾಗಿದೆ.

"ಕೋಲಾರ ತಾಲ್ಲೂಕಿನಲ್ಲಿ 44 ಕೆರೆಗಳು, ಮಾಲೂರು ತಾಲ್ಲೂಕಿನಲ್ಲಿ 13 ಕೆರೆಗಳು, ಬಂಗಾರಪೇಟೆ ತಾಲ್ಲೂಕಿನಲ್ಲಿ 14 ಕೆರೆಗಳು, ಮುಳಬಾಗಿಲು ತಾಲ್ಲೂಕಿನಲ್ಲಿ 35 ಕೆರೆಗಳು, ಶ್ರೀನಿವಾಸಪುರ ತಾಲ್ಲೂಕಿನಲ್ಲಿ 37 ಕೆರೆಗಳು, ಚಿಂತಾಮಣಿ ತಾಲ್ಲೂಕಿನಲ್ಲಿ 20 ಕೆರೆಗಳು, ಶಿಡ್ಲಘಟ್ಟ ತಾಲ್ಲೂಕಿನಲ್ಲಿ 27 ಕೆರೆಗಳು, ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ 21 ಕೆರೆಗಳು, ಗೌರೀಬಿದನೂರು ತಾಲ್ಲೂಕಿನಲ್ಲಿ 94 ಕೆರೆಗಳು, ಗುಡಿಬಂಡೆ ತಾಲ್ಲೂಕಿನಲ್ಲಿ 13 ಕೆರೆಗಳು, ಬಾಗೇಪಲ್ಲಿ ತಾಲ್ಲೂಕಿನಲ್ಲಿ 31 ಕೆರೆಗಳನ್ನು ನಿರ್ಮಿಸಲಾಗಿದೆ. ಚಿಂತಾಮಣಿಯ ಅಂಬಾಜಿ ದುರ್ಗದಲ್ಲಿ ಹುಟ್ಟುವ ಪಾಲಾರ್ ನದಿ ಕೋಲಾರ, ಮುಳಬಾಗಿಲು ತಾಲ್ಲೂಕುಗಳಾದ್ಯಂತ ಹರಿಯುತ್ತವೆ.

ಜಿಲ್ಲೆಯಲ್ಲಿ ದೊರೆತಿರುವ ಶಾಸನಗಳಲ್ಲಿ ಸು.100ಕ್ಕೂ ಹೆಚ್ಚು ಶಾಸನಗಳು"[2] ನೇರವಾಗಿ ಕೆರೆಗಳಿಗೆ, ನೀರಾವರಿಗೆ ಮತ್ತು ನೀರಾವರಿ ವ್ಯವಸ್ಥೆಗಾಗಿ ಮಾಡಿರುವ ದಾನ–ದತ್ತಿಗಳ ಪ್ರಸ್ತಾಪಮಾಡುವುದನ್ನು ಕಾಣಬಹುದಾಗಿದೆ. ಕೇವಲ ರಾಜಮನೆತನಗಳು ಮಾತ್ರವಲ್ಲದೆ ಅನೇಕ ಖಾಸಗಿ ವ್ಯಕ್ತಿಗಳು ಕೂಡ ತಮ್ಮ ಸ್ವಂತ ಖರ್ಚಿನಿಂದ ಕೆರೆಗಳನ್ನು ಕಟ್ಟಿಸಿರುವುದನ್ನು ಕಾಣಬಹುದಾಗಿದೆ. 'ಗಂಗರ ಆರಂಭದ ಕೇಂದ್ರ ಸ್ಥಾನವಾಗಿದ್ದ ಕೋಲಾರ ಪ್ರದೇಶದಲ್ಲಿ ವ್ಯಾಪಕ ಪ್ರಮಾಣದ ದಾನಶಾಸನಗಳು ಲಭ್ಯವಾಗಿದ್ದು ಆ ಕಾಲಘಟ್ಟದ ವೇಳೆಗೆ ಗಣನೀಯ ಪ್ರಮಾಣದ ಕೆರೆ ಕಟ್ಟೆಗಳು ನಿರ್ಮಾಣಗೊಂಡಿದ್ದು ಆ ಕೆರೆ ಕಟ್ಟೆಗಳ ಅಚ್ಚುಕಟ್ಟಿನ ಭೂ ದಾನಗಳೇ ಪ್ರಧಾನವಾಗಿ ಉಲ್ಲೇಖಿತಗೊಂಡಿರುವುದರಿಂದ ವಿಸ್ತೃತ ಕೆರೆ ನೀರಾವರಿ ಚೌಕಟ್ಟು ರೂಪುಗೊಂಡಿದ್ದಿತು. ಕೆರೆ ನೀರಾವರಿ ಚೌಕಟ್ಟನ್ನು ಪ್ರತಿನಿಧಿಸುವ ಬಹುತೇಕ ಶಾಸನಗಳು ಭೂದಾನ ಸ್ವರೂಪ ಹೊಂದಿರುವುದರಿಂದಾಗಿ ನಿರ್ಮಾಣ ದುರಸ್ತಿ ಹಾಗೂ ನಿರ್ವಹಣೆಯ ಕಾರ್ಯ ಕೈಗೊಂಡುದಕ್ಕೂ ಶಾಸನದ ಅಗತ್ಯಕ್ಕಿಂತ ಭೂದಾನ ಪಡೆದಿರುವವರ ಅನುಕೂಲಕ್ಕೆ ಶಾಶ್ವತಗೊಳಿಸುವ ಹಿನ್ನೆಲೆಯಲ್ಲಿ ಅಗತ್ಯವಾಗಿದ್ದವು.' (ಉದಹರಣೆಗೆ ಅರಿಕೇಸರಿಯು ತನ್ನ ಆಶ್ರಯದಲ್ಲಿದ್ದ ಪಂಪನಿಗೆ 'ಗುಣಾರ್ಣವ' ಕೆರೆಯನ್ನು ದಾನವಾಗಿ ಕೊಟ್ಟ ವಿಚಾರವನ್ನು ಇಲ್ಲಿ ನೆನಪಿಸಿ ಕೊಳ್ಳಬಹುದು.) ಈ ಭೂದಾನ ಶಾಸನಗಳು ಹೆಚ್ಚಿಗೆ ಯಾರಿಗೆ ಮತ್ತು ಯಾವ ಉದ್ದೇಶಕ್ಕೆ ನೀಡಲಾಗುತ್ತಿತ್ತು ಎಂಬುದು ಸಹ ಪ್ರಾಮುಖ್ಯತೆ ಗಳಿಸುತ್ತದೆ. ಕೆಲವು ಶಾಸನಗಳ ಆರಂಭದಲ್ಲಿ ವೀರ ಯೋಧರಿಗೆ ಯುದ್ಧದಲ್ಲಿ ಮಡಿದವರ ಕುಟುಂಬ ನಿರ್ವಹಣೆಗೆ ಅಥವಾ ಯುದ್ಧ ಜಯಿಸಿ ಬಂದ ವೀರನಿಗೆ ಬಹುಮಾನವಾಗಿ ನೀಡುತ್ತಿದ್ದ ಕೆರೆ ಅಂಚಿನ ಭೂದಾನಗಳು ಕ್ರಮೇಣ ದೇವಾಲಯಗಳ ನಿರ್ವಹಣೆಗಾಗಿ ದೇವಾಲಯಗಳಲ್ಲಿ ಪೂಜೆ ಮಾಡುವ ಬ್ರಾಹ್ಮಣರಿಗೆ, ಪುರೋಹಿತರಿಗೆ ನೀಡುವ ಪದ್ಧತಿ ಬೆಳೆದು ಬಂದಿರುವುದನ್ನು ತಿಳಿಯಬಹುದು.

ಸಾಮಾನ್ಯವಾಗಿ ಕೆರೆ ಎಂಬ ಪದ ನಮ್ಮ ಕಿವಿಗೆ ಬಿದ್ದ ಕೂಡಲೆ ನಮಗೆ ನೆನಪಿಗೆ ಬರುವುದು 'ಕೆರೆಗೆ ಹಾರ' ಜನಪದ ಗೀತೆ. ಈ ಜನಪದ ಹಾಡು ತನ್ನ ಸಾಹಿತ್ಯದ ಗುಣ ಸ್ವಭಾವದಿಂದ ಮನುಷ್ಯನಿಗೆ ಕೆರೆಯ ಮತ್ತು ಅದರ ನೀರಿನ ಮಹತ್ವವನ್ನು ತಿಳಿಸಿಕೊಡುತ್ತದೆ. 'ಹಾರ' ಎಂಬ ಪದವು ನಮಗೆ ಬಲಿ ಎಂಬ ಅರ್ಥವನ್ನೇ ನೀಡಿದರೂ ಇಲ್ಲಿನ ಕೆಲವು ಶಾಸನಗಳಲ್ಲಿ 'ಹಾರ' ಎಂಬ ಪದಪ್ರಯೋಗವನ್ನು 'ನೀಡಿದೆ', 'ಕೊಟ್ಟಿದೆ' ಎಂಬ ಅರ್ಥದಲ್ಲಿ ಬಳಸಲಾಗಿದೆ. ಲೋಕದಲ್ಲಿ ಸತ್ಕಾರ್ಯಗಳಲ್ಲಿ ಜಲರಕ್ಷಣೆಯೂ ಒಂದಾಗಿದೆ.

ಮಳೆಗಾಲದಲ್ಲಿ ನೀರಿನ ನಾನಾ ಕಡೆ ಹರಿದು ಎಲ್ಲೆಲ್ಲೋ ಹೋಗಿ ಕೊನೆಗೆ ನೀರಿನ ಅಭಾವ ಸೃಷ್ಟಿಯಾಗುತ್ತಿದ್ದ ದಿನಗಳಲ್ಲಿ ಜನರು ಕಂಡುಕೊಂಡ ಉಪಾಯ ಕೆರೆ, ಕಟ್ಟೆ, ಬಾವಿ, ಕುಂಟೆ ಮುಂತಾದ ನೀರನ್ನು ಹಿಡಿದಿಟ್ಟುಕೊಳ್ಳ ಬಹುದಾದ ವ್ಯವಸ್ಥೆಗಳ ರಚನೆ. ಇವುಗಳೇ ಮುಂದಿನ ತಲೆಮಾರುಗಳಿಗೆ ನೀರನ್ನು ಸದ್ಬಳಕೆ ಮಾಡುವ ಯೋಚನೆಯೆಡೆಗೆ, ನೀರಿಗಾಗಿ ಕಟ್ಟೆಗಳನ್ನು ಕಟ್ಟಿ ಕೆರೆಕಟ್ಟೆಗಳು, ಅಣೆಕಟ್ಟುಗಳು ಕಟ್ಟಲು ನಾಂದಿ ಹಾಡಿತು. ಜೊತೆಗೆ ನೀರಿನ ಮಿತ ಬಳಕೆಯ ಯೋಚನೆಗಳೂ ಮನುಷ್ಯನಲ್ಲಿ ಹುಟ್ಟತೊಡಗಿದವು..

ಒಂದು ಕಾಲದಲ್ಲಿ ಅತಿ ಹೆಚ್ಚು ಕೆರೆಗಳನ್ನು ಹೊಂದಿದ್ದ ಅವಿಭಜಿತ ಕೋಲಾರ ಜಿಲ್ಲೆ. ಆದರೆ ಅದರಲ್ಲಿ ಈಗ ಶೇ.75ರಷ್ಟು ಕೆರೆಗಳು ಮಾಯವಾಗಿವೆ. ಈಗ ಚಿಕ್ಕಬಳ್ಳಾಪುರ ಜಿಲ್ಲೆ ವ್ಯಾಪ್ತಿಗೆ ಬರುವ ಗೌರಿಬಿದನೂರು ಪ್ರದೇಶದ ಕೆರೆಗಳು ಇಂದು ಭೂಮಾಲೀಕರ ಜಮೀನಾಗಿಯೋ, ಸ್ಥಳೀಯ ಮತ್ತು ಕೇಂದ್ರ ಪ್ರಭುತ್ವಗಳ ಅಧಿಕಾರ ಲಾಲಸೆಗೋ ಒಳಗಾಗಿ ಕೆರೆಯ ಕುರುಹುಗಳನ್ನೇ ಕಳೆದುಕೊಂಡಿರುವುದನ್ನು ಕಾಣಬಹುದಾಗಿದೆ. ಬೆಟ್ಟಗುಡ್ಡಗಳಿಂದ ಕೂಡಿರುವ ಗೌರಿಬಿದನೂರು ಪ್ರದೇಶ ನೀರಿನ ಮೂಲವಾಗಿ ಕೆರೆಗಳನ್ನೇ ಆಶ್ರಯಿಸಿತ್ತು. ಆದ್ದರಿಂದಲೇ ಏನೋ ಈ ಪ್ರದೇಶವನ್ನಾಳಿದ ಹಲವಾರು ರಾಜಮಹಾರಾಜರಾದಿಯಾಗಿ ಹಿಡಿದು, ಮಾಂಡಲೀಕ, ನಾಡಪ್ರಭು, ಪಾಳೇಗಾರ, ಸಾರ್ವಜನಿಕರ ವರೆಗೆ ಎಲ್ಲರೂ ಕೆರೆಗಳನ್ನು ನಿರ್ಮಾಣ ಮಾಡಿ ದಾನ ದತ್ತಿಗಳನ್ನು ನೀಡಿರುವ ಮಾಹಿತಿ ನಮಗೆ ಶಾಸನಗಳಲ್ಲಿ ಸಿಗುತ್ತದೆ.

ವರ್ಷಪೂರ್ತಿ ಹರಿಯುವ ಯಾವ ನದಿಗಳೂ ಜಿಲ್ಲೆಯಾದ್ಯಂತ ಇಲ್ಲದ್ದೂ ಸಹ ನೀರಿನ ಬವಣೆಯನ್ನು ನೀಗಿಸಲು ಪ್ರತಿಯೊಬ್ಬರೂ ಕೆರೆಗಳನ್ನು ನಿರ್ಮಾಣ ಮಾಡಲು ಆಸಕ್ತಿ ತೋರಿದರು. ಕೆರೆಗಳನ್ನು ನಿರ್ಮಾಣ ಮಾಡುವ ಸಂದರ್ಭದಲ್ಲಿ ಆ ಕೆರೆಯನ್ನು ಯಾಕೆ ನಿರ್ಮಿಸುತ್ತಿದ್ದಾರೆ, ಅದರಿಂದ ವಾಸಿಸುತ್ತಿರುವ ಜಾಗಕ್ಕೆ ಇರುವ ಉಪಯೋಗಗಳೆಷ್ಟು ಎಂಬುದನ್ನು ಶಾಸನಗಳ ಮುಖೇನ ತಿಳಿಸಿದ್ದಾರೆ. 'ಕೆರೆ ಅಥವಾ ಜಲಾಶಯಗಳ' ನಿರ್ಮಾಣ ಎಷ್ಟು ಮುಖ್ಯವೋ ಅದರಲ್ಲಿ ನಿಂತ ನೀರನ್ನು ಸಾಗುವಳಿಗೆ ಬೇಕಾಗುವಂತೆ ಉಪಯೋಗಿಸಲು ನಿರ್ಮಿಸುವ ಕಾಲುವೆಗಳೂ ಅಷ್ಟೇ ಮುಖ್ಯ.

ಇದಕ್ಕೆ ಒಂದು ಅತ್ಯುತ್ತಮ ಶಾಸನೋಕ್ತ ಉದಾಹರಣೆ ಸಿಂಗಾಯಭಟ್ಟ ರಚಿಸಿದ ಕಾಲುವೆ. 'ಪೆನುಗೊಂಡೆ ವಿಜಯನಗರದ ಒಂದು ಮುಖ್ಯ ಸಂಸ್ಥಾನ ಅಲ್ಲಿಗೆ ಹೆಂನೆಯ(ಪೆನ್ನಾರ್) ನದಿಯಿಂದ ಸಿರುವೆರದ ಕೆರೆಗೆ ಕೊಂಡೊಯ್ಯಲು ಹರಿಹರನ ಮಗನಾದ ಪ್ರತಾಪ ಬುಕ್ಕರಾಯನು ಸಿಂಗಾಯಭಟ್ಟನೆಂಬುವನಿಗೆ ನಿರೂಪ ಕೊಟ್ಟು ಬರಸಿದ'. ನದಿಯಿಂದ ಕೆರೆಗೆ ಕಾಲುವೆಯನ್ನು ತೋಡಿ ನೀರನ್ನು ಕೆರೆಗೆ ಒಯ್ದು ಅಲ್ಲಿಂದ ಪೆನುಗೊಂಡೆಯಂತಹ ದೊಡ್ಡ ಪಟ್ಟಣಕ್ಕೆ ನೀರುಣಿಸಿದ್ದನ್ನು ಶಾಸನ ಹೇಳುತ್ತದೆ. ನಮ್ಮ ಇಂದಿನ ಜಲವಿಜ್ಞಾನ ತಂತ್ರಜ್ಞಾನಗಳಿಗೆ ಹಿಂದೆ ಇಂತಹ ಒಂದು ಉತ್ತಮ ಅನ್ವಯಿಕ ತಂತ್ರಜ್ಞಾನ ಗೊತ್ತಿತ್ತು ಎನ್ನುವುದಕ್ಕೆ ನಿಖರ ದಾಖಲೆಗಳು ಇವೆ ಎನ್ನುವ ವಿಷಯ ಇನ್ನೂ ಪ್ರಚಾರಗೊಳ್ಳಬೇಕಿದೆ.' ತಂತ್ರಜ್ಞಾನ, ಯಂತ್ರಜ್ಞಾನ ಎಲ್ಲವೂ ಇರುವ ಇಂದಿನ ಆಧುನಿಕ ಯುಗದಲ್ಲೂ ಸಹ ಬರಗಾಲದಿಂದ ಪೀಡಿತವಾದ ಪ್ರದೇಶಗಳಿಗೆ ನೀರನ್ನು ತರಲು ಮತ್ತು ನೀರಿನ ಪ್ರಮಾಣದಿಂದ ಹಾನಿಗೊಳಗಾಗುತ್ತಿರುವ ಪ್ರದೇಶಗಳನ್ನು ರಕ್ಷಿಸಲು ಹೆಣಗಾಡುತ್ತಿರುವ ಈ ಸಂದರ್ಭದಲ್ಲಿ ಕ್ರಿ.ಶ.1388ರ ಈ ಸಿಂಗಾಯಭಟ್ಟನ ಶಾಸನ ಅತ್ಯಭೂತಪೂರ್ವವಾದದ್ದು.

'ಈಶ್ವರ ಸಮುದ್ರ' ಎಂಬ ಕೆರೆಯನ್ನು ಕಟ್ಟುವ ಸಂದಂರ್ಭದಲ್ಲಿ ತಂತ್ರಪಾಲ ಲಕುಮನಾಯಕ ಎಂಬುವವನ್ನು ಅಯ್ಯಾವೊಳವಿನಲ್ಲಿ ಒಂದು ಕೆರೆಯನ್ನು ಕಟ್ಟಿದಾಗ ಅರಸಪ್ಪಯ್ಯ ಎಂಬ ತಂತ್ರಪಾಲನ್ನು ಹೆಸರಿಸುವುದು ಕಂಡುಬರುತ್ತದೆ ರೈತನು ಬೆಳೆದರೆ ಲೋಕವು ಬದುಕುತ್ತದೆ ಎಂಬ ಸತ್ಯವನ್ನು ಕಂಡುಕೊಂಡ ಹಿಂದಿನ ಕಾಲದ ಅರಸರು, ಅಧಿಕಾರಿಗಳು ಹಾಗೂ ಸಾಮಾನ್ಯರು ಕೃಷಿ ಜನಾಂಗದ ಅಭಿವೃದ್ಧಿಗಾಗಿ ಮತ್ತು ಪ್ರಜೆಗಳ ಹಿತಕ್ಕಾಗಿ ಹಾಗೂ ಸಾಮ್ರಾಜ್ಯದ ಯಶೋಭಿವೃದ್ಧಿಗಾಗಿ ಅನೇಕ ಕೆರೆ, ಕಟ್ಟೆ,ಮತ್ತು ಕಾಲುವೆಗಳನ್ನು ನಿರ್ಮಿಸಲು ಶ್ರಮಿಸುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ.

ಗುಮ್ಮನಾಯಕನ ಪಾಳ್ಯದ ನಾಯಕರ, ಆವತಿ ನಾಡಪ್ರಭುಗಳ, ಸುಗಟೂರು ನಾಡಪ್ರಭುಗಳ ಪಾಳೇಪಟ್ಟುಗಳು ಸದಾ ಹಸಿರಿನಿಂದ ಕಂಗೊಳಿಸುತ್ತಿತ್ತು.ಇವರು ತಮ್ಮ ಪಾಳೇಪಟ್ಟುಗಳ ನಾಡನ್ನು ನಿರ್ಮಿಸಿದ್ದೇ ಕಾಡನ್ನು ಕಡಿದು. ಇವರು ತಮ್ಮ ಪಾಳೇಪಟ್ಟುಗಳನ್ನು ಕಟ್ಟಿದ್ದೇ ಬೆಟ್ಟಗುಡ್ಡ ಪ್ರದೇಶಗಳ ತಪ್ಪಲಲ್ಲಿ ಮತ್ತು ಬೆಟ್ಟಗಳ ಅಂಚಿನಲ್ಲಿ. ಇವರ ಮೂಲ ಆದಾಯ ಕೃಷಿಯೇ ಆಗಿದ್ದಿದ್ದರಿಂದ ಕೃಷಿಗೆ ಬೇಕಾದ ನೀರು ಮತ್ತು ಫಲವತ್ತಾದ ಭೂಮಿ ಒದಗಿಸಲು ಸದಾ ಶ್ರಮಿಸುತ್ತಿದ್ದರು. ಕಾಡನ್ನು ಕಡಿದ ನಂತರ ಸಮತಟ್ಟು ಮಾಡಿ ಒಂದು ಕಡೆ ಕೃಷಿ ಭೂಮಿ ವಿಂಗಡಿಸಿದರೆ ಮತ್ತೊಂದು ಕಡೆ ಮಳೆ ನೀರು ನಿಲ್ಲುವಂತೆ ಒಡ್ಡುಗಳನ್ನು ನಿರ್ಮಿಸಿ ವಿಶಾಲವಾದ ಕೆರೆ ಪ್ರದೇಶಗಳನ್ನು ನಿರ್ಮಿಸಿದರು. ಅದಷ್ಟೇ ಅಲ್ಲದೆ ನೀರಿನ ಮೂಲಗಳಾದ ಕೆರೆಗಳನ್ನು ಮಲ್ಲಿಗೆ ಹೂವನ್ನು ಪೋಣಿಸುವಂತೆ ಕೆರೆಗಳನ್ನು ಒಂದಕ್ಕೊಂದು ಜೋಡಿಸಿಕೊಂಡು ಹೋದರು.

ಜಲವೇ ಜೀವನಾಧಾರ, ಇತಿಹಾಸದ ಆರಂಭವಾಗಿದ್ದೇ ನೀರಿನ ಆಸರೆ ಬಳಿ. ನೀರಿಲ್ಲದಿದ್ದರೆ ಯಾವುದೇ ಬೆಳವಣಿಗೆ ಕುಂಠಿತ. ಹೀಗಾಗಿ ಸಕಲ ಜೀವರಾಶಿಯೂ ನೀರನ್ನು ನಂಬಿದೆ. ಮಳೆ ಬರುವುದು ಸ್ವಲ್ಪ ತಡವಾದರೂ ಹಾಹಾಕಾರವುಂಟಾಗುತ್ತದೆ. ಹಿಂದಿನ ಕಾಲದಿಂದಲೂ ಮಳೆಯನ್ನು ಆಶ್ರಯಿಸಿ ಬದುಕು ಸಾಗಿದೆ. ಮಳೆ ಸುರಿದರೆ ಇಳೆ ಬೆಳೆಯುತ್ತದೆ. ಕಡಿಮೆ ಮಳೆಯಾದರೂ ಕ್ಷಾಮ, ಅತಿವೃಷ್ಟಿಯಿಂದಲೂ ಕ್ಷಾಮತಲೆದೋರುತ್ತದೆ. ಇದನ್ನು ಸರಿದೂಗಿಸಲು ಮಾನವ ಕೆರೆ, ಕುಂಟೆ, ಬಾವಿಗಳನ್ನು ನಿರ್ಮಿಸಿದ. ಅದರಲ್ಲಿ ನೀರನ್ನು ಶೇಖರಿಸಿ ಮಳೆಯಿಲ್ಲದ ಕಾಲದಲ್ಲಿ ಅದನ್ನು ಬಳಸತೊಡಗಿದ.

ಸಾವಿರಾರು ಉಲ್ಲೇಖಗಳು ಕೆರೆಗಳ ನಿರ್ಮಾಣದ ಬಗ್ಗೆ ತಿಳಿಸುತ್ತವೆ. ಆದರೆ ಕೆರೆಯನ್ನು ಹೇಗೆ ಕಟ್ಟಬೇಕು ಮತ್ತು ಅದರ ಉಪಯೋಗದ ಬಗ್ಗೆ ಹೆಚ್ಚಿನ ವಿವರಗಳನ್ನು ತಿಳಿಸುವುದಿಲ್ಲ. ಆಕಾಶದಿಂದ ಬೀಳುವ ಮಳೆಯನ್ನು ಹಿಡಿದಿಡುವುದು ಪುಣ್ಯದ ಕೆಲಸವೆಂದು ಹಿಂದಿನವರು ಭಾವಿಸಿದ್ದರು. ಇಂತಹ ಭಾವನೆಯ ಹಿನ್ನೆಲೆಯಲ್ಲಿ ಕೆರೆಯನ್ನು ರಚಿಸಬೇಕಾದರೆ ಹಿಂದಿನವರು ಅನುಸರಿಸುತ್ತಿದ್ದ ಸೂತ್ರಗಳೇನು? ಅದರ ಇಹಪರ ಫಲಗಳೇನು?ಎಂಬುದಕ್ಕೆ ಉದಾಹರಣೆಯಾಗಿ ಕಡಪಾ ಜಿಲ್ಲೆಯ ಪೋರುಮಾಮಿಳ್ಳ ಎಂಬಲ್ಲಿನ ಶಾಸನವು ಕೆರೆಯ ರಚನೆ ಹೇಗಿರಬೇಕೆಂಬ ಬಗ್ಗೆ ಹನ್ನೆರಡು ಸೂತ್ರಗಳನ್ನು ಮುಂದಿರಿಸಿದೆ. ಕ್ರಿ..ಶ.15ನೆಯ ಶತಮಾನಕ್ಕೆ ಸೇರಬಹುದಾದ ಈ ಶಾಸನದಲ್ಲಿನ ಸೂತ್ರಗಳು ಇಂದಿನ ನೀರಾವರಿ ಇಂಜಿನಿಯರುಗಳಿಗೆ ಮಾರ್ಗದರ್ಶಿಯಾಗಬಲ್ಲವು. ಕಡಿಮೆ ವೆಚ್ಚದಲ್ಲಿ ಕೆರೆಯನ್ನು ನಿರ್ಮಿಸಬಹುದಾದ ಹಾಗೂ ನಮ್ಮ ಹಳೆಯ ತಾಂತ್ರಿಕತೆಯನ್ನು ತಿಳಿಸಬಹುದಾದ ಶಾಸನ ಇದಾಗಿದೆ. ಸ್ಥಳದ ಆಯ್ಕೆ, ಬೇಕಾಗುವ ಪರಿಕರಗಳು, ಕೆರೆಯ ಕಟ್ಟೆ ಇರಬೇಕಾದ ರೀತಿ ಇವೆಲ್ಲವನ್ನು ಸೂಕ್ಷ್ಮವಾಗಿ ಈ ಶಾಸನ ತಿಳಿಸುತ್ತದೆ.

**ಗೌರಿಬಿದನೂರು ಶಾಸನಗಳಲ್ಲಿ ಕೆರೆಯ ನಿರ್ವಹಣೆಯ ಜಲಸೂತ್ರಗಳು**

**ಶಾಸನವು ಕೆರೆಯ ರಚನೆ ಹೇಗಿರಬೇಕೆಂಬ ಬಗ್ಗೆ ಹನ್ನೆರಡು ಸೂತ್ರಗಳನ್ನು ಹೇಳಿದೆ ಅವು :**

"1. ದಾನಿಯಾದ ರಾಜ ಅಥವಾ ಹಣವಂತ ವ್ಯಕ್ತಿ. 2. ಜಲಸೂತ್ರಧಾರಿ(ನೀರಿನ ಗುಣವನ್ನು ಬಲ್ಲವನು)

3. ಗಟ್ಟಿಯಾದ ನೆಲ. 4. ನೀರುಣಿಸುವ ನದಿ/ತೊರೆ/ಹಳ್ಳ. 5. ಸುತ್ತಮುತ್ತ ಬೆಟ್ಟಗಳು. 6. ಗಟ್ಟಿಯಾದ ಆದರೆ ಉದ್ದವಿಲ್ಲದ ಕಲ್ಲಿನ ಅಣೆಕಟ್ಟು. 7. ಕೆರೆಯ ಕೆಳಗೆ ನೀರು ಹೋಗಲು ಹಾದಿ 8. ಆಳವಾದ ತಳಪಾಯ. 9. ಉದ್ದವಾದ ಕಲ್ಲಿನ ಸೀಳುಗಣಿ. 10. ಸುತ್ತ ಅಥವಾ ಕೆರೆಯ ಹಿಂಬದಿಯಲ್ಲಿ ಫಲವತ್ತಾದ ನೆಲ. 11. ತೂಬುಗಳು. 12. ನುರಿತ ಕೆಲಸಗಾರರು"[3]

ಇವುಗಳಿಂದ ನಿರ್ಮಿತವಾದ ತಟಾಕವು(ಕೆರೆ) ಭೂಮಿಯಲ್ಲಿ ಶ್ರೇಷ್ಠವೆಂದು ಹೇಳಿದೆ. ಅರಸರು ಕೆರೆ ಕಟ್ಟೆ ಕಾಲುವೆಗಳನ್ನು ನಿರ್ಮಿಸಬೇಕಾದಲ್ಲಿ ಸ್ಥಳ ಶೋಧನೆ ಮಾಡಿ ಯೋಜನೆಯನ್ನು ರೂಪಿಸುವುದಕ್ಕೋಸ್ಕರ ತಾಂತ್ರಿಕವಾಗಿ ಪರಿಣತಿ ಹೊಂದಿದ್ದವರೊಂದಿಗೆ ಸಮಾಲೋಚಿಸುತ್ತಿದ್ದರು. ಇಂತಹ ಪರಿಣಿತರನ್ನು ಶಾಸನಗಳು ಜಲಸೂತ್ರದಾರರು, ತಂತುಗಾರರು ಎಂದು ಕರೆದಿವೆ.

ಜಲಾಶಯ ಅಥವಾ ಕೆರೆ ಎಂಬುದು ದೇವತೆಗಳಿಗೆ, ಮನುಷ್ಯರಿಗೆ, ಪಿತೃಗಳಿಗೆ, ಗಂಧರ್ವರಿಗೆ, ಉರಗಗಳಿಗೆ, ರಾಕ್ಷಸರಿಗೆ, ಮರಗಳಿಗೆ ಮತ್ತು ಭೂತಗಳಿಗೆ ಆಶ್ರಯವೆಂದೂ ನೀರನ್ನು ಗೋವುಗಳು ಮೃಗ, ಪಕ್ಷಿ, ಮಾನವರು ಕುಡಿಯಲು ಬಳಸುವುದರಿಂದ ಕಟ್ಟಿಸಿದವರಿಗೆ ಅಶ್ವಮೇಧದ ಫಲ ಲಭಿಸುತ್ತದೆ ಎಂದಿದೆ. ಇದರಿಂದ ತನ್ನ ಪಿತೃಗಳು ಸಂತೋಃಷಿಸುತ್ತಾರೆ.ತಂದೆ ತಾತಂದಿರು ನೃತ್ಯ ಮಾಡುತ್ತಾರೆ.

**ಅತಿವೃಷ್ಟಿ** ಪ್ರದೇಶಗಳಿರುವ ಶಾಕ್ತವು ಭೂಮಿ ಪೂಜೆಯ ರೂಪದಲ್ಲಿದ್ದರೆ. **ಅನಾವೃಷ್ಟಿಯ** ಪ್ರದೇಶಗಳಲ್ಲಿ ಜಲಾರಾಧನೆ ರೂಪದಲ್ಲಿದೆ. ಹೊಸಬಾವಿ ತೋಡುವಾಗ ಜಲ ಬೀಳಲೆಂದು ಪ್ರಾರ್ಥಿಸುತ್ತಾ ಕೈವಾರ ತಾತಯ್ಯ ರಚಿಸಿದ 'ಏನಮ್ಮ ಗಂಗಾಭವಾನಿ' ಹಾಡು ಕೋಲಾರ ಸೀಮೆಯ 'ಗಂಗಾವತಾರಣ' ಆಗಸದಿಂದ ಬೀಳುವ ಮಳೆ ಗಂಡಾದರೆ. ಬಿದ್ದನೀರು ಹೊಳೆಯಾಗಿ ಹರಿದು ಅಥವಾ ನೆಲಗರ್ಭದೊಳಗಿಂದ ಚಿಲುಮೆಯಾಗಿ ಚಿಮ್ಮಿ ಸ್ತ್ರೀಯಾಗುವುದು. ಈ ನೀರು ಮತ್ತು ಕೃಷಿಗಳು ಶಾಕ್ತೇಯ ಸಮುದಾಯಗಳನ್ನು ಒಳಗೊಳ್ಳುತ್ತದೆ. ತೋಡಿದ ಬಾವಿಯಲ್ಲಿ ಉಕ್ಕಿದ ಮೊದಲ

ಜಲವನ್ನು ಮಾದಿಗರು ಮುಟ್ಟಿ ಪವಿತ್ರಗೊಳಿಸುವ ಪದ್ಧತಿ ಆಂಧ್ರದಲ್ಲಿದೆ. ಬಹುಶಃ ಹೀಗೆ ನಡೆಯಲು ಕಾರಣ ಭೂಮಿಯ ಮೊದಲ ಪುರುಷನಾದ ಆದಿಜಾಂಬವ ಮುನಿಯ ಮಕ್ಕಳು ಎಂಬುದು ಕಾರಣವಾಗಿರಬಹುದು.

"ಕೆರೆಯಂ ಕಟ್ಟಿಸು, ಬಾವಿಯಂ ಸವೆಸು, ದೇವಾಗಾರಮಂ ಮಾಡಿಸು
ಸಲ್ಕದನಾಥರಂ ಬಿಡಿಸು, ಮಿತ್ರರ್ಗಿಂಬುಕೆಯ್‌ನಂಬಿದ
ಶಿಷ್ಯರಂ ಪೊರೆಯೆನುತ್ತಿಂತೆಲ್ಲಮಂ ಪಿಂದೆತಾ
ತೊಟ್ಟು ಕಿವಿಯೊಳ್ ಲಕ್ಷ್ಮೀಧರಮಾತ್ಯನಾ

ಜಗತ್ತಿನ ಯಾವ ಸಾಹಿತ್ಯದಲ್ಲಿಯೂ ತಾಯಿ ಹೇಳುವ ಇಂಥಹ ಹರಕೆಸಿಗದು, ಕನ್ನಡ ಸಂಸ್ಕೃತಿಯೇ ಇಲ್ಲಿ ಹೆಪ್ಪುಗಟ್ಟಿದಂತಿದೆ. ಲಕ್ಷ್ಮೀಧರ ಬೆಳೆ ಬೆಳೆಯುತ್ತಾ ತಾಯಿಯ ಹರಕೆಯನ್ನು ಕಾರ್ಯಗತಗೊಳಿಸುತ್ತಾನೆ. ಆದ್ದರಿಂದಲೇ ಶಾಸನದ ಕವಿ ಅವನನ್ನು ಹೊಗಳುತ್ತಾನೆ. ಒಬ್ಬ ಉತ್ತಮ ಮನುಷ್ಯನನ್ನು ರೂಪಿಸುವ ಜನಪದ ಸಾಹಿತ್ಯದಂತೆ ಈ ಶಾಸನ ಪಾಠ ವ್ಯಕ್ತಿ ತನ್ನ ಜೀವನದಲ್ಲಿ ಶ್ರೇಷ್ಠ ಎಂದು ಅನ್ನಿಸಿಕೊಳ್ಳಲು ಏನು ಮಾಡಬೇಕು ಎಂಬುದನ್ನು ಸವಿವರವಾಗಿ ಕಟ್ಟಿಕೊಡುತ್ತದೆ.

ಇದಾನ್ ಕೊಳೆ ಈರೇಶ್ವತ್ತರಳುಂ ಒಕ್ಕಲ್ತನಂ ಕೆಯ್ವೊನಾ ವಿತ್ತಿದಲ್ಲಿವೆಳೆಯಾದ ಕೊಡುಗೆ. ಇದಾನ್ ಕಾದು ಸಲ್ವೋನ್ ಪರಮ ಕಲ್ಯಾಣ ತೀರ್ಥಂಗಳ್ ಅಪ್ಪಾರ್, ನೆಲನೊಂ ವೆಳೆಗೆ ಪಾರ್ವರುಂ ಪ್ರಜೆಯುಂ ತಣಿಗೆ ಈ ಮಾತುಗಳಲ್ಲಿ ರೈತನು ಬೆಳೆದರೆ ಲೋಕವು ಬದುಕುತ್ತದೆ ಎನ್ನುವ ಧ್ವನಿಯಿದೆ ಎಂಬುದಾಗಿ ಡಾ.ಎಂ.ಚಿದಾನಂದಮೂರ್ತಿಗಳು ಗುರುತಿಸಿದ್ದಾರೆ. ನೀರಾವರಿಯು ಮುಖ್ಯವಾಗಿ ನದಿ, ಕೆರೆ, ಬಾವಿಗಳನ್ನು ಅವಲಂಬಿಸಿದ್ದಿತು. ಕೆರೆ, ಬಾವಿಗಳನ್ನು ನಿರ್ಮಿಸುವುದು ಅತ್ಯಂತ ಶ್ರೇಯಸ್ಕರ ಎಂದು ನಂಬಿದ್ದ ಅರಸರು, ಅಧಿಕಾರಿಗಳು, ಸಾಮಾನ್ಯರು ತಮ್ಮ ಅಥವಾ ತಮ್ಮ ವಂಶಜರ ಹೆಸರಿನಲ್ಲಿ ಮತ್ತು ಅರಸರ ಹೆಸರಿನಲ್ಲಿ ಕೆರೆಯನ್ನು ಕಟ್ಟಿಸುತ್ತಿದ್ದರು"[4]

ಕಟ್ಟಿಸಿದ ಕೆರೆ ಬಾವಿಗಳನ್ನು ಯಾರೇ ಆಗಲಿ ನಾಶಪಡಿಸುವುದು ಅತ್ಯಂತ ಪಾಪಕರ ಎಂಬ ಭಾವನೆ ಇತ್ತು. ಆದುದರಿಂದಲೇ ಪ್ರಾಚೀನ ಕಾಲದ ಕೆರೆಗಳು ಹಲವಾರು ಶತಮಾನಗಳಾದರೂ ಉಳಿದುಕೊಂಡು ಬಂದಿವೆ. ಕೆರೆಗಳ ನಿರ್ಮಾಣವನ್ನು ಕೆಲವು ಶಾಸನಗಲು ನೇರವಾಗಿ ದಾಖಲಿಸಿದ್ದಾರೆ ದಾನ ಶಾಸನಗಳು ದಾನವಾಗಿ ಕೊಟ್ಟ ಪ್ರದೇಶದ ಸರಹದ್ದುಗಳ ವಿವರಣೆಯಲ್ಲಿ ಕೆರೆಗಳ ಇರುವಿಕೆಯನ್ನು ನಮ್ಮ ಗಮನಕ್ಕೆ ತರುತ್ತವೆ. ಕೆರೆಯ ನಿರ್ಮಾಣ ಕಾರ್ಯ ಅದರ ವೆಚ್ಚ ಹಾಗೂ ಅದರ ರಕ್ಷಣೆ, ದುರಸ್ತಿಗಳ ಬಗ್ಗೆ ಕೆಲವು ಶಾಸನಗಳು ವಿವರಗಳನ್ನು ನೀಡುತ್ತವೆ. ಹೊಸದಾಗಿ ಕೆರೆಗಳನ್ನು ಕಟ್ಟಿಸುವಾಗ ಕಾಡಂ ಕಡಿದು ಕನ್ನೆಗೆರೆಯಂ ಕಟ್ಟಿಸಿ ಪೂರಂ ಮಾಡುತ್ತಿದ್ದರು. ಅರಸರು ಕೆರೆ ಕಟ್ಟಿಸಿದವರನ್ನು ಪ್ರೋತ್ಸಾಹಿಸಲು ಕೆಲವು ರಿಯಾಯಿತಿಗಳನ್ನು ನೀಡುತ್ತಿದ್ದರು.

ಪ್ರಾಚೀನ ಕಾಲದಲ್ಲಿ ಗ್ರಾಮಗಳಿಗೆ ವ್ಯಕ್ತಿಯ ಹೆಸರಿನ ಮುಂದೆ ಪುರ, ಪಟ್ಟಣ ಎಂದು ಸೇರಿಸಿ ಹೆಸರಿಸುತ್ತಿದ್ದರು. ಹಾಗೆಯೇ ಕೆರೆಗಳನ್ನು ಕಟ್ಟಿಸಿದಾಗ ವ್ಯಕ್ತಿಯ ಹೆಸರಿನ ಜೊತೆಗೆ ಕೆರೆ ಎಂದಲ್ಲದೆ ಸಾಗರ, ಸಮುದ್ರ, ಅಂಬುಧಿ, ಸಂದ್ರ ಎಂದು ಸೇರಿಸಿ ಹೆಸರಿಸುತ್ತಿದ್ದರು. ಸಾಮಾನ್ಯವಾಗಿ ಜಲವಸತಿ ಇದ್ದಲ್ಲಿ ಜನವಸತಿ ನಿರ್ಮಾಣವಾಗುವುದು ಸಹಜ ಪ್ರಕ್ರಿಯೆ. ಹೀಗೆ ಜನವಸತಿಯು ಹೆಚ್ಚಾಗಿ ಅದು ಗ್ರಾಮವಾದಾಗ ಅಲ್ಲಿನ ಜನರು ತಮ್ಮ ಗ್ರಾಮವನ್ನು ಅಲ್ಲಿದ್ದ ಕೆರೆಯ ಹೆಸರಿನಲ್ಲಿಯೇ ಗುರುತಿಸಿಕೊಂಡಿರುವುದು ಕಂಡು ಬರುತ್ತದೆಯಲ್ಲದೆ, ಗ್ರಾಮಗಳ ಹಳೆಯ ಹೆಸರುಗಳನ್ನು ಬದಲಾಯಿಸಿ ಕೆರೆಗಳ ಹೆಸರಿನಿಂದಲೇ ಕರೆದಿರುವುದನ್ನು ಗಮನಿಸಬಹುದಾಗಿದೆ.

ಲಕ್ಷ್ಮಿಯ ಹೆಸರಲ್ಲಿ, ಚನ್ನಕೇಶವ ಹೆಸರಲ್ಲಿ, ಭಾಗೀರಥಿ ಹೆಸರಲ್ಲಿ ಕೆರೆ–ಸಾಗರ–ಸಂದ್ರಗಳಿದ್ದು ಬಹುಶಃ ಅವುಗಳಲ್ಲಿ ಕೆಲವಾದರೂ ಹಟ್ಟಿಲಕ್ಕಮ್ಮನ ಹೆಸರಿನಲ್ಲಿರುವ ಜಲತಾಣಗಳಾಗಿವೆ. ಸಂದ್ರ ಮತ್ತು ಸಮುದ್ರ ಗ್ರಾಮಗಳ ಹೆಸರಿನ ಉತ್ತರ ಪದಗಳಾದ ಈ ಸಂದ್ರ ಮತ್ತು ಸಮುದ್ರ ಎಂಬ ಪದಗಳು ಸಾಗರ, ನೀರು ಸಂಗ್ರಹ ಸ್ಥಳಗಳಾಗಿರದೆ ಇಲ್ಲಿ ಆಳ್ವಿಕೆ ನಡೆಸಿದ ಗಂಗರ ಅರಸರು, ನೊಳಂಬರು, ಚೋಳರು ಹೊಸ ಸ್ಥಳಗಳಲ್ಲಿ ನಿರ್ಮಾಣ ಮಾಡಿದ ಗ್ರಾಮಗಳಿಗೆ ಹೊಸ ಜನ ವಸತಿ ಪ್ರದೇಶಗಳೆಂದು ಗುರ್ತಿಸಲು ಸಂದ್ರ, ಸಮುದ್ರ ಎಂಬೆಲ್ಲ ಹೆಸರನ್ನು ಇಡುತ್ತಿದ್ದರು. ಹಾಗಾಗಿಯೇ ಹೊಸದಾಗಿ ಜನ ವಸತಿ ನಿರ್ಮಾಣವಾದ ಪ್ರದೇಶಗಳನ್ನೆಲ್ಲಾ ಸಂದ್ರ, ಸಮುದ್ರ ಎಂದು ಗುರ್ತಿಸುತ್ತಿದ್ದರು.

ಸಂದ್ರ. ಗಂಗಸಂದ್ರ, ಗಂಗಸಮುದ್ರ, ಕಮ್ಮಸಂದ್ರ, ದಮ್ಮಸಂದ್ರ, ಕನ್ನಸಂದ್ರ, ಅಳ್ಳಾಲಸಂದ್ರ, ಬೇಗೂರು ವೊಂಮಸಂದ್ರ, ಮಾರಗಾನಿಕುಂಟ, ನಲ್ಲಬಾಲಮ್ಮನಕುಂಟೆ ಎಂಬ ಗ್ರಾಮಗಳಷ್ಟೇ ಅಲ್ಲದೆ 'ಸಾಧಾರಣವಾಗಿ ಕೆರೆಗಳನ್ನು ಸಮುದ್ರ ಎಂದು ಉಲ್ಲೇಖಿಸಿರುವುದು ಕಂಡುಬರುತ್ತದೆ. ಆದರೆ

ಕೆಲವೊಂದು ಅಗ್ರಹಾರಗಳಿಗೆ ಸಮುದ್ರವೆಂದು ಕರೆದಿರುವ ಉಲ್ಲೇಖಗಳೂ ಸಿಗುತ್ತದೆ. ಮಂಗಸಮುದ್ರ, ಕೃಷ್ಣರಾಯಸಮುದ್ರ, ಪ್ರತಾಪರಾಯಸಮುದ್ರ, ಶ್ರೀರಂಗರಾಯಸಮುದ್ರ ಮೊದಲಾದವು ಅಂದಿನ ಕಾಲದಲ್ಲಿ ನೂತನವಾಗಿ ಸ್ಥಾಪಿಸಿದ ಅಗ್ರಹಾರದ ಹೆಸರುಗಳಾಗಿವೆ' ಇಂತಹ ಹಲವಾರು ಗ್ರಾಮಗಳ ಹೆಸರುಗಳನ್ನು ಜಿಲ್ಲೆಯಾದ್ಯಂತ ಕಾಣಬಹುದಾಗಿದೆ. ಬಯಲು ಸೀಮೆಯಲ್ಲಿ ಎಂದೂ ಬತ್ತದ ನೀರನ್ನು ಬಯಸುವ ಸ್ಥಳೀಯರ ಆಶೋತ್ತರವೇ ಕೆಲವು ನಂಬಿಕೆಗಳನ್ನು ಹುಟ್ಟುಹಾಕಿರುವುದನ್ನು ನೋಡಬಹುದಾಗಿದೆ. ಇಲ್ಲಿರುವ ಹಲವಾರು ಜಲಮೂಲವಾದ ಸ್ಥಳನಾಮಗಳನ್ನು ಗಮನಿಸಬಹುದು.

ಗೌರಿಬಿದನೂರು ಸುತ್ತಣ ತಾಲೂಕುಗಳಲ್ಲಿ ಅತಿಹೆಚ್ಚು ಗಂಗೆಯ ಹೆಸರಿನ ಊರುಗಳಿವೆ ಅವು : ಗಂಗಸಂದ್ರ, ಗಂಗಾಪುರ, ಗಂಗವಾರ, ಗಂಗಮ್ಮನಹಳ್ಳಿಗಳಂತ ಊರುಗಳಿವೆ. ಇನ್ನು ಕೆಲವು ಕೆರೆಗಳು ದೇವಾಲಯಗಳ ಹೆಸರಿನಲ್ಲಿ ಗುರುತಿಸಿ ಕೊಂಡಿವೆ ಉದಾ : ಗಂಗಾ ಭಾಗೀರತಿ ಕೆರೆ, ಚನ್ನಕೇಶವ ಕೆರೆ, ಸೌಮ್ಯ ಚನ್ನಕೇಶವ ಕೆರೆ ಇತ್ಯಾದಿ. ಕಡಿಮೆ ಮಳೆ ಬೀಳುವ ಪ್ರದೇಶದಲ್ಲಿರುವ ಇವು ಗಂಗರ ಆಳ್ವಿಕೆಯಿಂದಲೋ ಜನರ ಜಲಾಪೇಕ್ಷೆಯಿಂದಲೊ ಬಂದಿವೆ. ಈ ಕೆರೆ ಸಾಗರಸಂದ್ರಗಳು ನೀರಿನ ಜನತೆ ವೃತ್ತಿ ಸಂಬಂಧವುಳ್ಳ ಬೆಸ್ತರ ಅಗಸರ ಕಾರಣದಿಂದಲೂ ಹುಟ್ಟಿರುವ ಸಾಧ್ಯತೆಯಿದೆ. ಗಂಗಾಮತದಲ್ಲಿರುವ 'ಮತ' ಶಬ್ದವು ದರ್ಶನ ಎಂಬರ್ಥವನ್ನು ಸೂಚಿಸುತ್ತದೆ. ಜೀವದ ಸಂಕೇತವಾಗಿ ಜಲವನ್ನು ಹಿಡಿದಿರುವ ಬಾವಿ, ಕೆರೆ, ಹೊಂಡ, ಕೊಳ, ಕುರಷಗಳು ಪವಿತ್ರ ತಾಣ ಮತ್ತು ವಸ್ತುಗಳಾಗಿದ್ದು ಇವು ನೀರಾವರಿ, ಕೃಷಿ, ಮೀನುಗಾರಿಕೆ, ಅಗಸಗಾರಿಕೆಯಂತಹ ಆರ್ಥಿಕತೆಗಳ ಜತೆ ತಳಕು ಹಾಕಿಗೊಂಡಿದೆ ಜಲ ಸದಾ ಜಲಪ್ರದೇಶ ದಲ್ಲಿರುವವರಿಗೆ ಏನೂ ಆಗಿರುವುದಿಲ್ಲ.

ಆದರೆ ಜಲ ಪ್ರದೇಶದಲ್ಲಿರುವವರಿಗೆ ಅದೊಂದು ಜಲ ಮಾತ್ರವಲ್ಲ ಆರಾಧ್ಯ ದೈವ, ಅದೊಂದು ಶಕ್ತಿ, ಧರ್ಮದ ಪ್ರತಿರೂಪ ಹಾಗೆಯೇ ಪ್ರತಿ ಗ್ರಾಮಕ್ಕೂ ಕೆರೆಗಳನ್ನು ಹೊಂದಿದ ಬೆಟ್ಟಗುಡ್ಡ ಸಾಲುಗಳಲ್ಲಿ ವಾಸಿಸುತ್ತಿರುವ ಗೌರೀಬಿದನೂರು ಪ್ರದೇಶದ ಜನರಿಗೆ ಒಂದಲ್ಲ ಒಂದು ರೀತಿಯಲ್ಲಿ ಜಲದ ಬರವಂತೂ ಕಾಡುತ್ತಲೇ ಇರುತ್ತದೆ. ಅದಷ್ಟೇ ಅಲ್ಲದೆ ಹೆಚ್ಚು ಕೃಷಿಕ ಜನರೇ ವಾಸಿಸುವ ಈ ಪ್ರದೇಶದಲ್ಲಿ ಜಲವೇ ಜೀವನಾಧಾರ. ಜಲವೇ ದೈವವಾಗಿದೆ. ಆದ್ದರಿಂದಲೇ ಜಲದ ಮೂಲವಾದ ಗಂಗೆ, ಗಂಗಮ್ಮನನ್ನು ಹಬ್ಬಗಳ ಮೂಲಕ, ಜಾತ್ರೆಗಳ ಮೂಲಕ ಸದಾ ಪೂಜಿಸುತ್ತಾರೆ.

**ಗೌರಿಬಿದನೂರು ಸೇವಾ ಪ್ರತಿಷ್ಠಾನದವರು ಕೆರೆಗಳ ಸಂರಕ್ಷಣೆ ಮಾಡಿದ ವಿವರ :**

ಗಂಗಮ್ಮದೇವಿ ದೇವಾಲಯ ಮತ್ತು ಗಂಗಾಭಾಗೀರಥಿ ಕೆರೆಯ ಪ್ರವೇಶದ್ವಾ



ಗಂಗಾಭಾಗೀರಥಿ ಕೆರೆಯಲ್ಲಿ ಬೆಳೆದಿರುವ ದೊಡ್ಡ ಜಾಲಿ ಮರಗಳ ಡ್ರೋನ್ ದೃಶ್ಯ



ಮುದುಗಾನುಕುಂಟೆಯ ಗಂಗಾಭಾಗೀರಥಿ ಕೆರೆಯ ಊಳು ತೆಗೆಯುತ್ತಿರುವ ನೋಟ



ಮುದುಗಾನುಕುಂಟೆಗೆ ಕ್ಷೇತ್ರ ಕಾರ್ಯಕ್ಕೆ ಹೋದ ಸಂದರ್ಭ




ಕೆರೆಯ ಊಳು ಎತ್ತಿದ ಮಣ್ಣನ್ನು ಬಳಸಿ ಸಮೃದ್ಧವಾಗಿ ಬೆಳೆದು ನಿಂತಿರುವ ಬೆಳೆ



ಒತ್ತುವರಿಯಾದ ಕೆರೆಯ ಸರ್ವೇಕ್ಷಣೆ ಮಾಡಿ ಕೆರೆಯ ಜಾಗ ಗುರ್ತಿಸಿದ ಉಪವಿಭಾಗಾಧಿಕಾರಿಗಳ



ಚಿಕ್ಕಬಳ್ಳಾಪುರ ಜಿಲ್ಲೆಯ ಉಪ ವಿಭಾಗಾಧಿಕಾರಿಗಳಾದ ಶ್ರೀ ರಘುನಂದನ್‌ರವರು ಕೆರೆಯ ಸರ್ವೆ ಕಾರ್ಯದ ನಿಮಿತ್ತ ಭೇಟಿ ನೀಡಿದ ಸಂದರ್ಭ

ದೇವಾಲಯದ ಕಲ್ಯಾಣಿ ಸ್ವಚ್ಛತಾ ಕಾರ್ಯ



ಕಲ್ಯಾಣಿ ಸ್ವಚ್ಛತಾ ಕಾರ್ಯದಲ್ಲಿ ತೊಡಗಿರುವ ಗ್ರಾಮಸ್ಥರು, ಸೇವಾ ಪ್ರತಿಷ್ಠಾನದವರು



ಕಲ್ಯಾಣಿಯ ತಳ ಭಾಗ ಸ್ವಚ್ಛಗೊಳಿಸುತ್ತಿರುವ ಸೇವಾ ಪ್ರತಿಷ್ಠಾನದವರು, ಗ್ರಾಮಸ್ಥರು



ದೇವಾಲದ ಆವರಣದಲ್ಲಿ ವರಪ್ರಸಾದ್ ರೆಡ್ಡಿಯವರು ಸಸಿ ನೆಡುತ್ತಿರುವುದು



ಹೊಳೆಯ ನಿರ್ವಹಣೆಯಲ್ಲಿ ತೊಡಗಿರುವ ಗೌರಿಬಿದನೂರು ಸೇವಾಪ್ರತಿಷ್ಠಾನ ತಂಡದಲ್ಲಿ ವರಪ್ರಸಾದ್ ರೆಡ್ಡಿ



ಕೆರೆಯ ಪುನರುಜ್ಜೀವನಕ್ಕೆ ಮೊಟ್ಟಮೊದಲು ದೇಣಿಗೆ ನೀಡುತ್ತಿರುವ ಸಹೃದಯ ಹಿರಿಯ ಜೀವ

ಹಳ್ಳಿಯ ಜನ ಸ್ವ ಇಚ್ಛೆಯಿಂದ ಕೆರೆಯ ನಿರ್ವಹಣೆಗೆ ದೇಣಿಗೆ ನೀಡುತ್ತಿರುವುದು



ಗ್ರಾಮಸ್ಥರು ಕೆರೆಯ ಕಾರ್ಯಕ್ಕೆ ದೇಣಿಗೆ ನೀಡುತ್ತಿರುವುದು



**ಮುಧುಗಾನಕುಂಟೆ ಕೆರೆಯ ಪುನಶ್ಚೇತನಕಾರ್ಯದ ವಿವರ:**

- ಕೆಲಸವನ್ನು ಆರಂಭಿಸಿದ ದಿನಾಂಕ: 01.01.2020
- ಕೆರೆಯಒಟ್ಟು ವಿಸ್ತೀಣ: 74 ಎಕರೆಗಳು.
- ವ್ಯಯಿಸಿದ ಸಮಯ: ಒಟ್ಟು 84 ದಿನಗಳು (1200 ಗಂಟೆಗಳು)

- ಹೊರತೆಗೆಯಲಾದ ಮಣ್ಣು : 10000 ಟ್ರ್ಯಾಕ್ಟರ್ ಮತ್ತು 5200 ಟಿಪ್ಪರ್ ಟೋಡ್‌ಗಳು.
- ಅರಣ್ಯೀಕರಣ: 220ಕ್ಕೂ ಮಿಗಿಲಾದ ವಿವಿಧಜಾತಿಯ ಗಿಡಗಳನ್ನು ನೆಟ್ಟು ನಿರ್ವಹಿಸಲಾಗುತ್ತಿದೆ.
- ಕೃತಕ ದ್ವೀಪದ ನಿರ್ಮಾಣ: ಪಕ್ಷಿ ಸಂಪೋಷಣಣೆಗಾಗಿಕೆರೆಯ ಮಧ್ಯ ಭಾಗದಲ್ಲಿ80ಥ80 ವಿಸ್ತೀರ್ಣದ ಕೃತಕ ದ್ವೀಪದ ನಿರ್ಮಾಣ.
- ಇಂಗು ಗುಂಡಿಗಳ ನಿರ್ಮಾಣ: 60ಥ60 ವಿಸ್ತೀರ್ಣದ 3 ಇಂಗು ಗುಂಡಿಗಳ ನಿರ್ಮಾಣ.
- ರಾಜಕಾಲುವೆಗಳ ಸ್ವಚ್ಛತೆ: ಕೆರೆಯನ್ನು ಸಂಪರ್ಕಿಸುವ 3 ರಾಜಕಾಲುವೆಗಳನ್ನು ಸುಮಾರು 2.5 ಕಿ.ಮೀ.ವರೆಗೆ ಸ್ವಚ್ಛಗೊಳಿಸಲಾಗಿದೆ..
- ಪುನಶ್ಚೇತನಕಾರ್ಯದ ಪರಿಣಾಮ ಹದಿನೆಂಟು ವರ್ಷಗಳ ಬಳಿಕ ಕೆರೆತುಂಬಿದೆ.

**ಚೋಳಶೆಟ್ಟಿಹಳ್ಳಿ ಕೆರೆಯ ಸ್ಥಳೀಯ ಚರಿತ್ರೆ**

ಸೇವಾ ಪ್ರತಿಷ್ಠಾನದವರು ತಾವು ಕಂಡ ಎರಡನೇ ಕನಸಿನ ಕೂಸು. ಚಿತ್ರದಲ್ಲಿ ಕಾಣುವ ಮೊದಲನೆಯ ನೋಟವು ಪುನಶ್ಚೇತನಾ ಕಾರ್ಯಕ್ಕೆ ಒಳಪಟ್ಟಿದ್ದರೆ, ಎರಡೆನೆದರಲ್ಲಿ ನೀರು ತುಂಬಿದೆ.

ಚೋಳಶೆಟ್ಟಿಹಳ್ಳಿ ಕೆರೆಅಭಿವೃದ್ಧಿ ಕಾರ್ಯದಲ್ಲಿತೊಡಗಿರುವ ಸಮಾನಹೃದಯಗಳು



**ಪುನಶ್ಚೇತನ ಕಾರ್ಯದಲ್ಲಿ ತೊಡಗಿರುವ ಇಟಾಚಿ, ಜೆಸಿಬಿ, ಟಿಪ್ಪರ್ ದಿಗ್ಗಜರು**



ಚೋಳಶೆಟ್ಟಿಹಳ್ಳಿ ಕೆರೆಯ ಬಗ್ಗೆ ವಿವರ ಪಡೆಯುತ್ತಿರುವುದು



ಕೆರೆಯ ಮಣ್ಣನ್ನು ಗೊಬ್ಬರದ ಬದಲಿಗೆ ಬಳಸಿ ಬೆಳೆದಿರುವ ಸಮೃದ್ಧವಾದ ಜೋಳದ ಬೆಳೆ









**ಚೋಳಶೆಟ್ಟಿ ಹಳ್ಳಿ ಕೆರೆಯ ಪುನಶ್ಚೇತನಕಾರ್ಯದ ವಿವರ:**

- ಕೆಲಸವನ್ನು ಆರಂಭಿಸಿದ ದಿನಾಂಕ: 20.06.2020

- ಕೆರೆಯ ವಿಸ್ತೀರ್ಣ : 24 ಎಕರೆಗಳು.
- ವ್ಯಯಿಸಿದ ಸಮಯ : 54 ದಿನಗಳು.
- ಹೊರತೆಗೆಯಲಾದ ಮಣ್ಣು : 2900 ಟಿಪ್ಪರ್ ಲೋಡ್‌ಗಳು.
- ಪುನಶ್ಚೇತನಕಾರ್ಯದ ಪರಿಣಾಮ ಹತ್ತು ವರ್ಷಗಳ ನಂತರಕೆರೆತುಂಬಿ ಕೂಡಿ ಹರಿದಿದೆ.

**ಸಾರಗೊಂಡ್ಲು ಕೆರೆಯ ಸಾಂಸ್ಕೃತಿಕ ಅಂಶಗಳು**

**ಸಾರಗೊಂಡ್ಲು ಕೆರೆಯ ಊಳೆತ್ತುವ ಕಾರ್ಯಕ್ಕೆ ಮಹಿಳೆಯರಿಂದ ಕೆರೆಯ ಅಂಗಳದ ಭೂಮಿ ಪೂ**



ಗ್ರಾಮಸ್ಥರಿಂದಮಾಹಿತಿಪಡೆಯುತ್ತಿರುವುದು



**ದಿನ ಪತ್ರಿಕೆಗಳಲ್ಲಿ ಪ್ರಕಟವಾದ ಗೌರಿಬಿದನೂರು ಸೇವಾ ಪ್ರತಿಷ್ಠಾನದ ಸೇವಾ ಕಾರ್ಯ**



ಶುಕ್ರವಾರ 02 ಸೆಪ್ಟೆಂಬರ್ 2022 Email indusanje@gmail.com ಇಂದು ಸಂಜೆ 7

**ಹರಿಯುವ ಗಂಗಮ್ಮನನ್ನು ನಿಲ್ಲಿಸಿ ಶೇಖರಣೆ ಮಾಡುವ ಭಗೀರಥರ ಪ್ರಯತ್ನ**

ಯಶಸ್ಸಿನ ಹಿಂದೆ ಯುವ ಪಡೆ.ಸಾಮಾಜಿಕ ಸೇವಾ ಸಂಸ್ಥೆಗಳ ಪ್ರೋತ್ಸಾಹ। ಅಂತರ್ಜಲ ಹೆಚ್ಚಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖ

ಟೇಕಲ್‌ನ ತಿಮ್ಮನಾಯಕನಹಳ್ಳಿ ಗ್ರಾಮದ ಇತಿಹಾಸ ಪುಸಿದ್ಧ | ಬಿಜೆಪಿ ಮುಖಂಡ ಗಣೇಶ್ ಕುಮಾರಸ್ವಾಮಿ

ಸೇವಾ ಪ್ರತಿಷ್ಠಾನದ ಗ್ರಾಮಸ್ಥರೊಂದಿಗೆ ಮಾಹಿತಿ ಪಡೆದ ಸಂದರ್ಭ



**ಸಾರಗೊಂಡ್ಲು ಕೆರೆಯ ಪುನಶ್ಚೇತನ ಕಾರ್ಯದ ವಿವರ:**

- ಕೆಸಲವನ್ನು ಆರಂಭಿಸಿದ ದಿನಾಂಕ: 09.03.2021
- ಕೆರೆಯ ವಿಸ್ತೀರ್ಣ : 34 ಎಕರೆಗಳು
- ವ್ಯಯಿಸಿದ ಸಮಯ : 58 ದಿನಗಳು.
- ಹೊರತೆಗೆಯಲಾದ ಮಣ್ಣು : 4200 ಟಿಪ್ಪರ್ ಮತ್ತು 3000 ಟ್ರ್ಯಾಕ್ಟರ್ ಲೋಡ್‌ಗಳು
- ಇಂಗು ಗುಂಡಿಗಳ ನಿರ್ಮಾಣ.
- ಕೃತಕ ದ್ವೀಪದ ನಿರ್ಮಾಣ : 40ಥ40 ವಿಸ್ತೀರ್ಣದ ಕೃತಕ ದ್ವೀಪದ ನಿರ್ಮಾಣ
- ರಾಜಕಾಲುವೆಗಳ ಸ್ವಚ್ಛತೆ: ಕೆರೆಯನ್ನು ಸಂಪರ್ಕಿಸುವ ಎರಡು ರಾಜಕಾಲುವೆಗಳನ್ನು ಸುಮಾರು 2 ಕಿ.ಮೀ.ವರೆಗೆ ಸ್ವಚ್ಛಗೊಳಿಸಲಾಗಿದೆ.
- ಪುನಶ್ಚೇತನಕಾರ್ಯದ ಪರಿಣಾಮ ಹನ್ನೊಂದು ವರ್ಷದ ಬಳಿಕ ಕೆರೆಎರಡು ಬಾರಿತುಂಬಿದೆ.

**ಸೋನೆಗಾನಹಳ್ಳಿ ಚನ್ನಕೇಶವನ ಕೆರೆಯ ಸ್ಥಳೀಯ ಚರಿತ್ರೆ**

ಪುನಶ್ಚೇತನಾ ಕಾರ್ಯದ ಪ್ರಗತಿಯಲ್ಲಿ ತೊಡಗಿರುವ ವಾಹನಗಳು



**ಪುನಶ್ಚೇತನದ ನಂತರ ಸೋನೆಗಾನಹಳ್ಳಿ ಕೆರೆಯಲ್ಲಿ ನೀರುತುಂಬಿ ಕಣ್ಮನಸೆಳೆಯುವ ದೃಶ್ಯ**



ಗೌರಿಬಿದನೂರು ತಾಲೂಕು ಸೋನೆಗಾನಹಳ್ಳಿಯಲ್ಲಿರುವ ಚನ್ನಕೇಶವನ ದೇವಾಲಯಕ್ಕೆ ಹೊಂದಿಕೊಂಡಿರುವ ಸದರಿ ಕೆರೆಯ ಪುನರುಜ್ಜೀವನ ಕಾರ್ಯವನ್ನು ನಾಲ್ಕನೆಯ ಆಧ್ಯತೆಯಾಗಿ ಮಾಡಿಕೊಳ್ಳಲಾಯಿತು.

**ಸೊನಗಾನಹಳ್ಳಿ ಕೆರೆಯ ಪುನಶ್ಚೇತನಕಾರ್ಯ:**

- ಕೆಲಸ ಆರಂಭವಾದ ದಿನ: 14.02.2022
- ಕೆಲಸ ಮುಕ್ತಾಯದ ದಿನ: 24.03.2022
- ಕೆಲಸ ಒಟ್ಟು ವಿಸ್ತೀರ್ಣ : 41 ಎಕರೆಗಳು
- ವ್ಯಯಿಸಿದ ದಿನಗಳು : 38 ದಿನಗಳು
- ಹೊರತೆಗೆಯಲಾದ ಮಣ್ಣು : 5000 ಟ್ರ್ಯಾಕ್ಟರ್ ಲೋಡ್, 500 ಟಿಪ್ಪರ್ ಲೋಡ್.
- ಇಂಗು ಗುಂಡಿಗಳ ನಿರ್ಮಾಣ : 4 ಅಡಿ ಆಳ ಮತ್ತು50ಥ50 ಅಡಿ ಉದ್ದದ ಇಂಗುಗುಂಡಿಗಳ ನಿರ್ಮಾಣ
- ರಾಜಕಾಲುವೆಗಳ ಸ್ವಚ್ಛತೆ: ಕೆರೆಯನ್ನು ಸಂಪರ್ಕಿಸುವ ರಾಜಕಾಲುವೆಗಳನ್ನು 1/2 ಕಿ.ಮೀಟರ್‌ವರೆಗೂಸ್ವಚ್ಛಗೊಳಿಸಲಾಗಿದೆ.
- ಪುನಶ್ಚೇತನಕಾರ್ಯದ ಪರಿಣಾಮ ಮೂವತ್ತು ವರ್ಷಗಳ ನಂತರ ಶೇ.70 ಪ್ರತಿಶತಕೆರೆಯುತುಂಬಿದೆ.

**ಮುದುಗೆರೆಯ ಸೌಮ್ಯ ಲಕ್ಷ್ಮಿಚನ್ನಕೇಶವ ಕೆರೆಯ ಸಾಂಸ್ಕೃತಿಕ ಅಂಶಗಳು**

ಗೌರಿಬಿದನೂರು ತಾಲೂಕು ಮುದುಗೆರೆಯಲ್ಲಿ ಸೌಮ್ಯ ಲಕ್ಷ್ಮಿಚನ್ನಕೇಶವ ದೇವಸ್ಥಾನಕ್ಕೆ ಹೊಂದಿಕೊಂಡಂತೆ ಇರುವ ಅದೇ ಹೆಸರಿನ ಸದರಿ ಕೆರೆಯನ್ನು ಸೇವಾಪ್ರತಿಷ್ಠಾನದ ವತಿಯಿಂದ ಅವರ ಯೋಜನೆಯ ಐದನೆಯ ಕೆರೆಯಾಗಿ ಪುರುಜ್ಜೀವನಕಾರ್ಯದಲ್ಲಿ ತೊಡಗಿಸಿಕೊಂಡರು.

**ಕೆರೆಯ ಊಳು ಹೊತ್ತೊಯ್ಯಲು ಸರದಿಯಲ್ಲಿ ನಿಂತಿರುವ ಟಿಪ್ಪರ್ ಲಾರಿ, ಟ್ರ್ಯಾಕ್ಟರ್‌ಗಳು**



**ಕೆರೆಯ ಊಳನ್ನು ಟಿಪ್ಪರ್ ಲಾರಿಗಳಿಗೆ ತುಂಬುತ್ತಿರುವ ಇಟಾಚಿ**

**ಮಧುಗೆರೆ ಕೆರೆಯ ಪುನಶ್ಚೇತನಕಾರ್ಯ:**

- ಕೆಲಸವನ್ನು ಆರಂಭಿಸಿದ ದಿನ: 27.04.2022
- ಕೆಲಸ ಮುಕ್ತಾಯದ ದಿನ: 05.06.2022
- ವ್ಯಯಿಸಿದ ದಿನಗಳು : 40 ದಿನಗಳು
- ಕೆರೆಯಒಟ್ಟು ವಿಸ್ತೀರ್ಣ: 282 ಎಕರೆಗಳು, ಕಾರ್ಯನಿರ್ವಹಿಸಿದ್ದು – 20 ಎಕರೆ, ಅದರಲ್ಲಿ 15 ಎಕರೆಗಳಷ್ಟು ಹೂಳತ್ತು ತೆಗೆಯಲಾಗಿದೆ ಮತ್ತು 5 ಎಕರೆಗಳಷ್ಟು ಭಾಗವನ್ನು ಸಂಪೂರ್ಣ ಸ್ವಚ್ಛಗೊಳಿಸಲಾಗಿದೆ.
- ಹೊರತೆಗೆಯಲಾದ ಮಣ್ಣು: 500 ಟಿಪ್ಪರ್ ಲೋಡ್‌ಗಳು ಮತ್ತು 1600 ಟ್ರ್ಯಾಕ್ಟರ್ ಲೋಡ್‌ಗಳು.
- 20ಥ15 ಅಳತೆಯ ಇಂಗು ಗುಂಡಿಯ ನಿರ್ಮಾಣ.
- ರಾಜಕಾಲುವೆಗಳ ಸ್ವಚ್ಛತೆ: ಕೆಂಕರೆಗ್ರಾಮದಿಂದ– ಮುಧುಗೆರೆಗ್ರಾಮದವರೆಗೂ 4.5 ಕಿ.ಮೀಟರ್‌ಉದ್ದದರಾಜಕಾಲುವೆಯ ಸ್ವಚ್ಛತೆ.
- ಪುನಶ್ಚೇತನಕಾರ್ಯದ ಪರಿಣಾಮಇಪ್ಪತ್ತನಾಲ್ಕು ವರ್ಷದ ಬಳಿಕ ಕೆರೆತುಂಬಿ ಕೋಡಿ ಹರಿಯುತ್ತಿದೆ.

**ಉಪಸಂಹಾರ**

**ಫಲಿತಗಳು :**

ಮಳೆ ಬೀಳುವ ಮಳೆಗಾಲದ ಮುಂಚಿತವಾಗಿಯೇ ಇಳಿಜಾರಿಗೆ ಹರಿದು ಹೋಗುವ ರಾಜಕಾಲುವೆಗಳನ್ನು, ಕಾಲುವೆಗಳನ್ನು, ಚರಂಡಿಗಳನ್ನು ಒತ್ತುವರಿದಾರರಿಂದ ಬಿಡಿಸಿ, ಅದರಲ್ಲಿನ ಕಸ–ಕಡ್ಡಿ ಊಳನ್ನು ತೆಗೆದು ನೀರು ಸರಾಗವಾಗಿ ಹರಿದು ಬರುವಂತೆ ವ್ಯವಸ್ಥೆ ಮಾಡಬೇಕು. ನಗರದಲ್ಲಿ ಕೆರೆಗಳನ್ನು ಆಕ್ರಮಿಸಿ ಫ್ಯಾಕ್ಟರಿಗಳನ್ನು ಸಾಫ್ಟ್‌ವೇರ್ ಕಂಪನಿಗಳನ್ನು, ದೊಡ್ಡದೊಡ್ಡ ಮಾಲ್‌ಗಳನ್ನು ಅಪಾರ್ಟ್‌ಮೆಂಟ್‌ಗಳನ್ನು ಮುಲಾಜಿಲ್ಲದೆ ತೆರವುಗೊಳಿಸಸಬೇಕು. ಸರ್ಕಾರವೇ ಕೆರೆಯ ಜಾಗವನ್ನು ಸಾರ್ವಜನಿಕ ಉದ್ದೇಶಗಳಿಗಾಗಿ ಪಾರ್ಕ್, ಆಸ್ಪತ್ರೆ, ಕ್ರೀಡಾಂಗಣ, ಬಸ್‌ಟರ್ಮಿನಲ್‌ಗಳು ಇತ್ಯಾದಿ ಸಂಸ್ಥೆಗಳನ್ನು ಸ್ಥಾಪಿಸುತ್ತಿರುತ್ತವೆ. ಅವುಗಳನ್ನು ತೆರವುಗೊಳಿಸಿ ಕೆರೆಯ ಪರಿಸರದ ವಾತಾವರಣ ಸೃಷ್ಟಿಸಬೇಕು. ಉದಾ: ಮೆಜೆಸ್ಟಿಕ್ ಬಸ್‌ಸ್ಟ್ಯಾಂಡ್, ಹಂಪಿನಗರದ ಬಸ್‌ಸ್ಟ್ಯಾಂಡ್‌ಗಳು ಹಿಂದೆ ಕೆರೆಗಳೇ ಆಗಿದ್ದವು. ಇತ್ತೀಚೆಗೆ ಹೆಸರುಘಟ್ಟ ಕೆರೆಯಂಚಿನಲ್ಲಿರುವ ಕೃಷಿ ವಿಸ್ತಾರ ಭೂಮಿಯನ್ನು ವಿವಿಧೋದ್ದೇಶಕ್ಕೆ ಬಳಸಲು ಸರ್ಕಾರ ಮುಂದಾಗಿದೆ ಅದನ್ನು ಕೈಬಿಡಬೇಕು. ಇತ್ತೀಚೆಗೆ ದೇವನಹಳ್ಳಿ ಸುತ್ತಮುತ್ತಲ ಕೃಷಿಭೂಮಿಯನ್ನು ಸರ್ಕಾರ ವಿವಿಧೋದ್ದೇಶಕ್ಕೆ ಬಳಸಿಕೊಳ್ಳುವಲ್ಲಿ ಮುಂದಾಗಿ ಅದು ಅಂತರಾಷ್ಟ್ರೀಯ ಮಟ್ಟದಲ್ಲೂ ಸುದ್ದಿಯಾಗಿದೆ. ಹಾಗಾಗಿ ಇದನ್ನು ಕೈಬಿಡಬೇಕು. ಯಾಕೆಂದರೆ ಹೆಸರಘಟ್ಟ, ದೇವನಹಳ್ಳಿಯ ಭೂಮಿಯಾಗಲೀ ಅಥವಾ ಇನ್ನಾವುದೇ ಪ್ರದೇಶದ ಭೂಮಿಯಾಗಲಿ ಅದು ಅರಣ್ಯ.ಬೆಟ್ಟಗುಡ್ಡ, ಕೃಷಿಭೂಮಿಯಾಗಿದ್ದರೆ ಖಂಡಿತ ಅಲ್ಲಿ ಕೆರೆಗಳು–ನದಿಗಳ ಸೆಲೆಗಳಿದ್ದು ಅವುಗಳು ಹಾಳಾಗುತ್ತವೆ. ಹಾಗಾಗಿ ಅವುಗಳನ್ನು ಯಥಾಸ್ಥಿತಿಯಲ್ಲಿ

ಕಾಯ್ದುಕೊಂಡು ಅವುಗಳ ಪುನರುಜ್ಜೀವನಕ್ಕೆ ಶ್ರಮಿಸಬೇಕು. ಪ್ರತಿಭಾರಿ ಕೆರೆ ನೀರು ಖಾಲಿಯಾದಾಗಲು ಅದರ ಊಳನ್ನು ತೆಗೆದು, ನೀರು ಬರುವ ಫೀಡರ್ ಚಾನಲ್‌ಗಳ ಕಾಲುವೆಗಳಲ್ಲೂ ಊಳು ತೆಗೆದು ದುರಸ್ತಿ ಮಾಡಬೇಕು. ಕಾಲಕಾಲಕ್ಕೆ ಕೆರೆಯ ಏರಿ, ತೂಬು, ಕಾಲುವೆಗಳಣ್ನು ದುರಸ್ತಿ ಮಾಡಬೇಕು.

ನಮ್ಮ ಪೂರ್ವಿಕರು ಪ್ರತಿಯೊಂದು ಊರಲ್ಲೂ ಒಂದು ಗುಡಿ, ಒಂದು ಕೆರೆ, ಒಂದು ಗುಂಡು ತೋಉ, ಒಂದು ಗೋಮಾಳ ಕಡ್ಡಾಯವಾಗಿ ನಿರ್ಮಿಸಿರುತ್ತಾರೆ. ಹಾಗಾಗಿ ಊರಿನ ಪ್ರತಿಯೊಬ್ಬ ವ್ಯಕ್ತಿಯು ತಮ್ಮ ಊರಿನ ಸಾರ್ವಜನಿಕ ಜಮೀನುಗಳ ಹುಡುಕಾಟವನ್ನು ಮಾಡಿ, ಆ ಸ್ಥಳ ಗುರ್ತಿಸಿ, ಅದನ್ನು ಯಾರೇ ಒತ್ತುವರಿ ಮಾಡಿಕೊಂಡಿರಲಿ, ಊರಿನ ಮುಖಂಡನಾಗಿರಲೀ, ರಾಜಕೀಯ ವ್ಯಕ್ತಿಯಾಗಿರಲೀ, ಸರ್ಕಾರಿ ಅಧಿಕಾರಿಯಾಗಿರಲೀ, ಬಡವರಿರಲಿ, ಶ್ರೀಮಂತರಿರಲಿ ಮುಲಾಜಿಲ್ಲದೆ ಒತ್ತುವರಿ ತೆರವುಗೊಳಿಸಬೇಕು, ಇಂತಹ ಕಾರ್ಯಕ್ಕೆ ಊರಿಗೆ ಊರೇ ಒಗ್ಗಟ್ಟಾಗಿರಬೇಕು, ಸಾಧ್ಯವಾದರೆ ಕಾನೂನು, ನ್ಯಾಯಾಲಯದ ಮೊರೆ ಹೋಗಿಯಾದರು ತೆರವುಗೊಳಿಸಬೇಕು. ನಮ್ಮ ದುರಾದೃಷ್ಟವೆಂದರೆ "ಬೇಲಿಯೇ ಎದ್ದು ಹೊಲ ಮೇದಂತೆ" ಈ ಜಾಗಗಳನ್ನು ಸಂರಕ್ಷಿಸಬೇಕಾದ ಅಧಿಕಾರಿಗಳೇ, ರಾಜಕಾರಣಿಗಳೇ, ಸರ್ಕಾರಗಳೇ ಕಬಳಿಸಿರುವುದು ದುರಂತವೇ ಸರಿ. ಮಳೆ ಬಂದಾಗ ಅದರಿಂದಾಗುವ ಹಾನಿಯ ಪರಿಹಾರಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುವ ಬದಲು ಲಕ್ಷಾಂತರ ರೂಪಾಯಿಗಳಲ್ಲಿ ಕೆರೆ, ಕಾಲುವೆ, ನದಿ, ರಾಜಕಾಲುವೆಗಳ ಊಳು ತೆಗೆದು ಕೆರೆಯ ಪುನಶ್ಚೇತನ ಕಾರ್ಯದಲ್ಲಿ ತೊಡಗಬೇಕು.ಪ್ರತಿಯೊಬ್ಬ ಹಳ್ಳಿಯ ಜನ, ಪಟ್ಟಣದ ಜನ 'ಗೋಮಾಳ, ರಾಜಕಾಲುವೆ', ಕೆರೆ, ಗುಂಡುತೋಪುಗಳಂತಹ ಸಾರ್ವಜನಿಕ ಅಥವಾ ಸರ್ಕಾರ ಜಮೀನುಗಳ ರಕ್ಷಣೆಗೆ ಮುಂದಾಗಬೇಕು. ಈ ನಿಟ್ಟಿನಲ್ಲಿ ಗೌರಿಬಿದನೂರು ಸೇವಾ ಪ್ರತಿಷ್ಠಾನದವರ ಸೇವೆ, ವರಪ್ರಸಾದ ರೆಡ್ಡಿಯವರ ಶ್ರಮ, ಸಂಘಟನೆ, ಯೋಜನೆಗಳು ಇಡೀ ದೇಶಕ್ಕೆ ಮಾದರಿಯಾದರೆ ಯಾವ ನೆರೆ–ಪ್ರವಾಹವಾದರು ಸುಲಭವಾಗಿ ನಿಭಾಯಿಸಬಹುದು. ನಮ್ಮ ಪೂರ್ವಿಕರ ಕೆರೆ ನೀರಾವರಿ ಯೋಜನೆಯು ಅತ್ಯುತ್ತಮವಾಗಿದ್ದು ಅದನ್ನು ಯಥಾವತ್ತಾಗಿ ಪಾಲಿಸಿದರೆ ಸಾಕು ಬೇರೇನೂ ಮಾಡುವುದು ಬೇಡ. ಕುಂಟೆನೀರು ಕೆರೆಗೆ, ಕೆರೆನೀರು ನದಿಗೆ, ನದಿನೀರು ಸಮುದ್ರಕ್ಕೆ ಹೋಗುವಂತೆಯೇ ನಮ್ಮ ಪೂರ್ವಿಕರು ತುಂಬಾ ಹಿಂದೆಯೇ ವ್ಯವಸ್ಥೆ ಮಾಡಿರುತ್ತಾರೆ. ಆದರೆ ನಾವಿಂದು ಕೆರೆಗೆ ಹರಿದು ಹೋಗುವ ಕಾಲುವೆ, ನಾಲೆ, ರಾಜಾ ಕಾಲುವೆ ಮುಚ್ಚಿಹಾಕಿ, ಕೆರೆಗಳನ್ನು, ನದಿಗಳನ್ನು ಮುಚ್ಚಿಹಾಕಿದರೆ ಸುರಿದ ಮಳೆ ತಾನೇ ತಾನಾಗಿ ಸಮುದ್ರ ಸೇರುವುದಿಲ್ಲ. ಎಷ್ಟೇ ಪ್ರಮಾಣದ ಮಳೆ ಬಿದ್ದರು, ಎಷ್ಟು ಜೋರಾಗಿ, ಎಷ್ಟು ದಿನಗಳ ವರೆಗೆ ಮಳೆ ಸುರಿದರೂ, ಸುರಿದ ಮಳೆ ಸುರಿದಂತೆ ಸರಾಗವಾಗಿ ಹರಿದು ಹೋಗುವಂತೆ 'ಕಾಲುವೆ–ನಾಲೆ–ಕೆರೆ–ನದಿ–ಸಮುದ್ರ' ಸೇರುವಂತೆ ವ್ಯವಸ್ಥೆ ಮಾಡಿದರೆ ಸಾಕು ಮನುಕುಲ ನೆಮ್ಮದಿಯಿಂದ ಬದುಕಬಹುದು.ಇನ್ನು ಮುಂದಾದರು ನಾಡಿನ ಜನ, ಸರ್ಕಾರ, ಜನ ಪ್ರತಿನಿಧಿಗಳು ಈ ನಿಟ್ಟಿನಲ್ಲಿ ಯೋಚಿಸಿ, ಮನಸ್ಸು ಮಾಡಿ ಕೆರೆಯ ಪುನಶ್ಚೇತನ, ಪುನರುಜ್ಜೀವನ ಕಾರ್ಯದಲ್ಲಿ ಆಸಕ್ತಿ ತೋರಿ ಕಾರ್ಯ ಪ್ರವೃತ್ತರಾಗಲೆಂದು ನನ್ನ ಈ ಸಂಪ್ರಬಂಧದ ಆಶಯವಾಗಿದೆ. ಮುಂಬರುವ ಸಂಶೋಧಕರು ಇಡೀ ಕರ್ನಾಟಕದ, ಹಾಗೂ ದೇಶದ ಕೆರೆಗಳ ನಿರ್ಮಾಣ, ನಿರ್ವಹಣೆಗಳ ಬಗ್ಗೆ, ಅವುಗಳ ಸಾಧಕ ಬಾಧಕಗಳ ಬಗ್ಗೆ ಸಂಶೋಧನೆಯಲ್ಲಿ ತೊಡಗಬಹುದು.

**ಅಡಿಟಿಪ್ಪಣಿ**


1. ಚಿದಾನಂದ ಮೂರ್ತಿ.ಎಂ. ಕರ್ನಾಟಕ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಪ್ನ ಬುಕ್‌ಹೌಸ್, ಬೆಂಗಳೂರು, 2011
2. ವಿಜಯಕುಮಾರ್ ಎಸ್, ಕೋಲಾರ ಜಿಲ್ಲೆಯ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಬೆಂಳೂರು ವಿಶ್ವವಿದ್ಯಾಲಯ, ಬೆಂಗಳೂರು, 2022
3. ಶಾಸನ ಅಧ್ಯಾಯನ ಸಂಪುಟ–1 ಸಂಚಿಕೆ–1 (ಗೌರಿಸಂಚಿಕೆ) ಸಂ– ದೇವರ ಕೊಂಡಾರೆಡ್ಡಿ ಪು–55.
4. ರಾಜರಾಮ ಹೆಗಡೆ (ಸಂ): ಕೆರೆ ನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಪ್ರಸಾರಾಂಗ, ಹಂಪಿ ವಿದ್ಯಾರಣ್ಯ, 2002
5. ಗೋಪಾಲ ಆರ್ (ಸಂ), ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, 200